ಆ ಮಳೆ ದಿನದ ನಂತರ ಮುಟ್ಟು ನಿಂತಾಗ ಅವಳು ಆಶ್ಚರ್ಯದಿಂದ ಕೂಗಿಕೊಂಡಳು. ಅವಳಿಗೆ ಗೊತ್ತಾಯ್ತು, ಅವಳಿಗೆ ಅವಳೇ ಅರ್ಥಮಾಡಿಕೊಂಡಳು. ರೂಮಲ್ಲಿ ಒಬ್ಬಳೇ, ಅವಳೊಳಗೆ ಸಮುದ್ರದ ಭೋರ್ಗರೆತ. ಅವಳೆದುರಿಗೆ ಮುಚ್ಚಿದ್ದ ಎಲ್ಲಾ ಬಾಗಿಲುಗಳು ತೆರೆದುಕೊಂಡವು.

ಅಬೂಲ್ ಸುದ್ದಿ ಕೇಳಿ ಎಲ್ಲೋ ನೋಡ್ತಾ, 'ಹಾಗಾದ್ರೆ ವಂಶ ಉಳೀತು' ಅಂದ.

ಅತ್ತೆ ಅವಾಕ್ಕಾದಳು. ಅವಳಿಗೆ ಸಂತೋಷವಾಗಲಿಲ್ಲ. ಇದು ಅವಳ ಎರಡನೆ ಸೋಲು. ಕಠೋರ ಧ್ವನಿಯಲ್ಲಿ ಹೇಳಿದಳು, 'ಹೆಣ್ಣು ಹೆರಬೇಡ'.

ಮೊತಿಜಾನ್ ಕೇಳಿದಳು, 'ಗಂಡು ಮಗೂನೇ ಯಾಕೆ ಹುಟ್ಟಬೇಕು?'

'ಗಂಡು ಮಗುನೇ ಬೇಕು, ಇಲ್ಲದಿದ್ದರೆ ಒಳ್ಳೇದಾಗಲ್ಲ' ಅತ್ತೆ ಗುಡುಗಿದಳು.

ಈ ವರ್ಷ ಕೆಟ್ಟ ಬರಗಾಲ, ಫಸಲೆಲ್ಲ ಒಣಗಿ ಭೂಮಿಯೆಲ್ಲ ಬಿರಿತಾಯಿದೆ. ಮೊತಿಜಾನಳ ದೇಹ ಬಿಸಿಲಿನ ಝಳಕ್ಕೆ ಬಳಲಿ, ಆಯಾಸದಿಂದ ಬಸವಳಿದಂತಾಯಿತು. ದಣಿದ ದೇಹವನ್ನು ಒಳಗಿಂದ ಯಾರೋ ಕಿತ್ತು ತಿನ್ತಾಯಿದಾರೆ ಅನಿಸ್ತಾಯಿತ್ತು. ಮನಸ್ಸನ್ನು ಗಟ್ಟಿಮಾಡಿಕೊಂಡು ದೇಹದ ನಿಶ್ಯಕ್ತಿಯನ್ನು ನಿರ್ಲಕ್ಷ್ಯ ಮಾಡಲು ಪ್ರಯತ್ನಿಸಿದಳು.

ದಿನ ತುಂಬಿದ ಮೇಲೆ ಒಂದು ಹೆಣ್ಣುಮಗುವಿಗೆ ಜನ್ಮವಿತ್ತಳು ಮೊತಿಜಾನ್.

'ಹ ಹ್ಹ ಹ' ಅಂತ ವಿಕಾರವಾಗಿ ನಗುತ್ತಾ, 'ವಂಶ ಉಳೀಲಿಲ್ಲ' ಅಂದ ಅಬೂಲ್.

ಗುಲ್ನೂರ್ ಗಂಭೀರಳಾಗಿದ್ದಳು. ಮೊಮ್ಮಗಳ ಮುಖವನ್ನೂ ನೋಡಲಿಲ್ಲ. ಮೊತಿಜಾನ್ ಮಗಳನ್ನು ಎದೆಗವಚಿ ಹಿಡಿದುಕೊಂಡು, ತನ್ನೆಲ್ಲ ಪ್ರೀತಿ, ಸಂತೋಷವನ್ನು ಮಗುವಿಗೆ ಧಾರೆಯೆರೆದಳು. ಸುತ್ತೆಲ್ಲಾ ನಿರ್ಲಕ್ಷ್ಯವಿದ್ದರೂ ಕೊನೆಯಿಲ್ಲದ ಆನಂದದ ನದಿ ನಾಲ್ಕು ದಿಕ್ಕಿಗೆ ಅವಳನ್ನು ಆವರಿಸಿಕೊಂಡಿತ್ತು. ಮಗಳನ್ನು ಮುದ್ದು ಮಾಡ್ತಾಳೆ, ಹಾಡು ಹೇಳಿ ನಿದ್ದೆ ಮಾಡಿಸ್ತಾಳೆ. ಈ ಆನಂದವನ್ನು ಸಹಿಸೋಕಾಗ್ತಾಯಿಲ್ಲ ಗುಲ್ನೂರ್‌ಗೆ. ಮೊತಿಜಾನ್ ತನಗೆ ತಾನೇ ಗಟ್ಟಿಯಾಗಿ ಹೇಳಿಕೊಳ್ತಾಳೆ, ನಾನು ಬಯಸಿದರೆ ಇಂಥ ನೂರು ಹೆಣ್ಮಕ್ಕಳನ್ನು ಹಡೆಯಬಲ್ಲೆನೆಂದು. ಈಗವಳು ಸುಮ್ಮನಿರುವುದಿಲ್ಲ, ಮಾತಿಗೆ ಮಾತು ಕೊಡ್ತಾಳೆ. ಜಗಳ ಕಾಯ್ತಾಳೆ. ಗುಲ್ನೂರ್ ಮೆತ್ತಗಾದಳು.

ಇತ್ತೀಚೆಗೆಂತೂ ಅಬೂಲ್ ಮನೆಗೆ ಬರೋದೆ ಇಲ್ಲ. ಮೊತಿಜಾನ್‌ಗೆ ಯಾರೋ ಹೇಳಿದರು, ಅವನು ಸೂಳೇನ ಬಿಟ್ಟು ಇನ್ಯಾರದೋ ಜೊತೆಯಲಿದಾನೆ ಅಂತ; ಅವಳಿಗೆ ಹಟ ಬೆಳೀತು.

ವರ್ಷಗಳುರುಳಿದವು. ಮತ್ತೊಮ್ಮೆ ಲೋಕಮಾನ್. ಈಗಲೂ ಹೆಣ್ಣುಮಗುವನ್ನು ಹಡೆದಳು ಮೊತಿಜಾನ್. ಗುಲ್ನೂರ್ ಒಂದು ವಾರ ಸುಮ್ಮನಿದ್ದಳು. ಆಮೇಲೆ ಡಂಗುರ ಹೊಡೆದಳು, 'ಯಾವ ಹೆಣ್ಣು ಬರೀ ಹೆಣ್ಮಕ್ಕಳನ್ನೇ ಹೆರ್ತಾಳೋ ಅವಳು ಸಂಸಾರ ಉಳಿಸೋದಿಲ್ಲ. ಮಗ ಬಂದ ಮೇಲೆ ಈ ಹೆಣ್ಣಿಗೆ ತಲಾಖ್ ಕೊಡಿಸಿ ಅಪ್ಪನ ಮನೆಗೆ ಕಳಿಸ್ತೀನಿ'.

ಮೊತಿಜಾನ್ ಉದಾಸೀನಳಾಗಿ ಈ ಮಾತು ಆಲಿಸಿದಳು. ಈಗವಳಿಗೆ ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳೋಕೆ ಪುರುಸೊತ್ತಿಲ್ಲ. ಎರಡು ಹೆಣ್ಮಕ್ಕಳನ್ನ ನೋಡಿಕೊಳ್ಳೋದ್ರಲ್ಲಿ ಅವಳ ದಿನವೆಲ್ಲ ಕಳೆದುಹೋಯ್ತದೆ. ಅದರ ಜೊತೆಗೆ ಮನೆ ಕೆಲಸವೆಲ್ಲಾ ಮಾಡಬೇಕು. ಕೆಲಸ ಮಾಡಿ ಮಾಡಿ ಸುಸ್ತಾದ ದೇಹ ಬಿದ್ದೋಗುತ್ತೆ ಅನಿಸುತ್ತೆ.

